ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4202
ಮಾನ್ಯ ಸದಸ್ಯರ ಹೆಸರು : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.
ಉತ್ತರಿಸುವವರು : ಶ್ರೀ ತನ್ವೀರ್ ಸೇಠ್
(ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು)

ಸಂಖ್ಯೆ	ಪ್ರಶ್ನೆ	ಉತ್ತರ
1	ಸರ್ಕಾರ ಯಾವ ಯಾವ ವಲಯ, ವೃತ್ತಿಗಳನ್ನು ಸಂಘಟಿತ ವಲಯ ಎಂಬುದಾಗಿ ಘೋಷಿಸಿದೆ.	ಸರ್ಕಾರವು ವೃತ್ತಿಗಳನ್ನು ಆಧರಿಸಿ ಸಂಘಟಿತ ಮತ್ತು ಅಸಂಘಟಿತ ವಲಯ ಎಂಬುದಾಗಿ ಘೋಷಿಸಿರು ವುದಿಲ್ಲ.
2	ಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಎಷ್ಟು; ಅಸಂಘಟಿತ ವಲಯ ಗಳ ಕಾರ್ಮಿಕರ ಸಂಖ್ಯೆ ಎಷ್ಟು;	2003ರ ತ್ರೈಮಾಸಿಕ ಉದ್ಯೋಗ ಪರಿ ಶೀಲನೆ ಮತ್ತು ಉದ್ಯೋಗ ತರಬೇತಿ ಇಲಾಖೆಯ ಸಂಚಿಕೆಯ ಅನುಗುಣ ವಾಗಿ ಸಂಘಟಿತ ಕಾರ್ಮಿಕರ ಸಂಖ್ಯೆ: 18,30,600 2001ನೇ ಜನಗಣತಿಯ ಪ್ರಕಾರ 1,65,85,412 ಅಸಂಘಟಿತ ಕಾರ್ಮಿಕ ರಿರುತ್ತಾರೆ.
3	ಅಸಂಘಟಿತ ಕಾರ್ಮಿಕರ ಕಲ್ಯಾಣ ಕ್ಕಾಗಿ ಸರ್ಕಾರ ಎಷ್ಟು ವೆಚ್ಚದಲ್ಲಿ ಯಾವ ಯಾವ ಯೋಚನೆಗಳನ್ನು ಹಮ್ಮಿ ಕೊಂಡಿದೆ(ವಿವರ ಒದಗಿಸು ವುದು)	ಸರ್ಕಾರವು ಅಸಂಘಟಿತ ವಲಯದ ಕಾರ್ಮಿಕರಿಗೆ ಸದ್ಯಕ್ಕೆ ಯಾವುದೇ ಯೋಜನೆಗಳನ್ನು ಹಮ್ಮಿಕೊಂಡಿರು ವುದಿಲ್ಲ.

ಸಂಖ್ಯೆ	ಪ್ರಶ್ನೆ	ಉತ್ತರ
4	ಅಸಂಘಟಿತ ವಲಯ ಕಾರ್ಮಿಕರ ಜೀವನ ಭದ್ರತೆ ಬಗ್ಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ? ತಿಳಿಸಿ (ವಿವರ ಒದಗಿಸುವುದು)	ಅಸಂಘಟಿತ ಕಾರ್ಮಿಕರ ಜೀವನ ಭದ್ರತೆ ಒಳಗೊಂಡಂತೆ ಇತರೆ ವಿಷಯ ಗಳ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಸರ್ಕಾರವು ಅಸಂಘಟಿತ ಕಾರ್ಮಿಕರಿಗೆಂದು ಕರ್ನಾಟಕ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಸೂದೆ 2002ನ್ನು ಸದನದಲ್ಲಿ ಮಂಡಿಸಿದ್ದು, ಸದನ ಸಮಿತಿ ಪರಿಶೀಲನೆಯಲ್ಲಿರುತ್ತದೆ. 2. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ 1996 ಅನುಷ್ಠಾನಕ್ಕೆ ತರಲು ನಿಯಾಮಾವಳಿಗಳನ್ನು ರೂಪಿಸ ಲಾಗುತ್ತಿದೆ. 3. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಸೇವಾ ಭದ್ರತೆ, ಸಾಮಾಜಿಕ ನ್ಯಾಯ ಒದಗಿಸುವ ಬಗ್ಗೆ ಪರಿಣಾಮ ಕಾರಿ ಮಾರ್ಗೋಪಾಯದ ಬಗ್ಗೆ ಅಭ್ಯಸಿಸಿ ವರದಿ ಸಲ್ಲಿಸಲು ಸಂಸ್ಥೆಗೆ ವಹಿಸಿದ್ದು, ಸದರಿ ಸಂಸ್ಥೆಯವರು ವರದಿ ಸಲ್ಲಿಸಿದ್ದು, ವರದಿಯು ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

– ಪ್ರಶ್ನೆ ಸಂಖ್ಯೆ : 324 (4202)

ಉತ್ತರದ ಪ್ರತಿಯನ್ನು ಲಗತ್ತಿಸಿದೆ –

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರ ತಂದೆ ಬೀಡಿ ಕಾರ್ಮಿಕರ ನಿಧಿಯನ್ನು ಸ್ಥಾಪಿಸಿದವರು. ಆದರೆ ಇಲ್ಲಿ ಕೊಟ್ಟಿರುವ ಉತ್ತರದಲ್ಲಿ ಯಾವುದೇ ವಿಧವಾದ ಸಂಘಟಿತ ಕಾರ್ಮಿಕರ ಸಂಖ್ಯೆಗಿಂತ ಅಸಂಘಟಿತ ಕಾರ್ಮಿಕರ ಸಂಖ್ಯೆ ಜಾಸ್ತಿ ಇದೆ. ಅವರ ಬದುಕಿನ ಬವಣೆಯಾಗಿದೆ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಕೂಡ ಈ ಕಾರ್ಮಿಕರ ರಕ್ಷಣೆಯೇನು? ಈ ಕಾರ್ಮಿಕರೇನಾದರೂ ಸತ್ತರೆ ಅವರಿಗೆ

ಕೊಡಬೇಕಾದುದೇನು? ಅದನ್ನು ಏಕೆ ಈ ಸರ್ಕಾರ ಹಾಕಿಲ್ಲ. ಇದರ ಬಗ್ಗೆ ಏಕೆ ಕಾಳಜಿಯನ್ನು ವಹಿಸಿಲ್ಲ? ಅಸಂಘಟಿತ ಕಾರ್ಮಿಕರಿಗೆ ಭದ್ರತೆ, ಕಾರ್ಮಿಕ ಕಲ್ಯಾಣ, ಸಾರ್ವಜನಿಕ ನ್ಯಾಯ ಒದಗಿಸುವ ದೃಷ್ಟಿಯಿಂದ ಸರ್ಕಾರವೇನು ಕ್ರಮವನ್ನು ತೆಗೆದುಕೊಂಡಿದೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಅಸಂಘಟಿತ ಹಾಗೂ ಸಂಘಟಿತ ಕಾರ್ಮಿಕರ ಸಂಖ್ಯೆ ಹಾಗೂ ಅವರ ಅವರ ವೃತ್ತಿಗಳನ್ನು ಪ್ರತ್ಯೇಕವಾಗಿ ಸರ್ಕಾರ ಗುರುತಿಸಿದೆಯೇ ಎಂದು ಕೇಳಿರುವ ಪ್ರಶ್ನೆಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಕಾರಣ, ಸಂಘಟಿತ ಕಾರ್ಮಿಕರು ಮಾಡಿರುವ ಕೆಲಸ ಏನು ಇದೆ, ಅದೇ ಕೆಲಸವನ್ನು ಇವತ್ತು ಅಸಂಘಟಿತ ಕಾರ್ಮಿಕರೂ ಸಹಾ ಮಾಡುತ್ತಿದ್ದಾರೆ. ಇವತ್ತು ರಾಜ್ಯಸರ್ಕಾರ ಕನಿಷ್ಠವೇತನವನ್ನು ಒಂದು ಕಡೆ ನಿಗದಿ ಮಾಡಿದ್ದರೂ ಸಹಾ ವಿಶೇಷವಾಗಿ ಈ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಕೊಡುವ ವಿಚಾರದಲ್ಲಿ ಹಿಂದೆ 2002 ರಲ್ಲಿ ಒಂದು ಮಸೂದೆಯನ್ನು ತರಲು ಹಿಂದಿನ ಸರ್ಕಾರ ಯೋಚಿಸಿದ್ದು, ಇದು ಮೇಲ್ಮನೆಯಲ್ಲಿ ವಿಷಯ ಸಮಿತಿಗೆ ವರ್ಗಾಯಿಸಿ ಅದರಲ್ಲಿರುವ ಕೆಲವು ನ್ಯೂನತೆಗಳನ್ನು ಕಂಡು ಪ್ರಸ್ತುತ ಸಾಲಿನಲ್ಲಿ ನಾವು ಅದನ್ನು ಹಿಂತೆಗೆದುಕೊಂಡು ವಿಶೇಷವಾಗಿ ಈ ಕಾರ್ಮಿಕರ ಬೇಡಿಕೆಗಳು ಹಾಗೂ ಅವರ ಇಚ್ಛೆ ಹಾಗೂ ತಿಂಗಳು ತಿಂಗಳು, ಪಾವತಿ ಮಾಡಬೇಕಾಗಿರುವ ಕಂತು ಅವರ ಶಕ್ತಿ ಆಧಾರವನ್ನು ಮುಂದಿಟ್ಟುಕೊಂಡು ಹೈಟೆಕ್ ಸಂಸ್ಥೆಗೆ ಇದರ ಬಗ್ಗೆ ಅಧ್ಯಯನ ಮಾಡಲು ವರದಿಯನ್ನು ಕೊಡಲು ನಾವು ಕೇಳಿದ್ದೇವೆ. ಆ ವರದಿ ಈಗಾಗಲೇ ಸರ್ಕಾರಕ್ಕೆ ಬಂದಿದೆ. ಇಲಾಖೆಯ ಅಭಿಪ್ರಾಯಗಳನ್ನು ನಾವು ಕ್ರೋಢಿಕರಿಸಿ ಮುಂದಿನ ದಿನಗಳಲ್ಲಿ ಇದರ ಮೇಲೆ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದಾಗುತ್ತೇವೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮೂಲಕ ನಾನು ಹೇಳಬಯಸುತ್ತೇನೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: ಮಾನ್ಯ ಉಪಾಧ್ಯಕ್ಷರೇ, ಇದುವರೆಗೆ ಏಕೆ ಮಾಡಿಲ್ಲ? ಅಸಂಘಟಿತ ಕಾರ್ಮಿಕರ ಕಾರ್ಮಿಕ ಕಲ್ಯಾಣ, ಸಾರ್ವಜನಿಕ ನ್ಯಾಯದ ದೃಷ್ಟಿಯಿಂದ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂದು ಹೇಳಬೇಕು.

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೇ, ಈವರೆಗೂ ಏಕೆ ಮಾಡಿಲ್ಲ

ಎನ್ನುವುದಕ್ಕಿಂತ ಈಗ ಮಾಡುವುದಕ್ಕೆ ಮುಂದಾಗಿರುವುದನ್ನು ಮಾನ್ಯ ಸದಸ್ಯರು ಮೆಚ್ಚಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ...

ಹೆಚ್. ಎಸ್. ಶಂಕರಲಿಂಗೇಗೌಡ : ನಾನು ಒಂದು ಸಾಲನ್ನು ಹೇಳುತ್ತೇನೆ. "ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು. ಕಲ್ಲಾಗು ಕಪ್ಪಗಳ ಮಳೆ ವಿಧಿ ಸುರಿಯೆ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ, ಎಲ್ಲರೊಳ ಗೊಂದಾಗು ಮಂಕುತಿಮ್ಮ" ಎಂದು ಹೇಳಿದ್ದಾರೆ.

ತನ್ವೀರ್ ಸೇಠ್ : ಮಾನ್ಯ ಉಪಾಧ್ಯಕ್ಷರೇ, ಈ ವಿಚಾರದಲ್ಲಿ ಇವತ್ತು ಸಂವಿಧಾನದ ಅಡಿಯಲ್ಲಿಯೂ ಪ್ರತಿಯೊಬ್ಬರಿಗೂ ಸಾಮಾಜಿಕ ಭದ್ರತೆಯನ್ನು ಕೊಡತಕ್ಕಂಥದ್ದರ ಬಗ್ಗೆ ಸಂವಿಧಾನದಲ್ಲಿಯೂ ನಮೂದಿಸಿರುವುದರಿಂದ ಈ ವಿಚಾರದಲ್ಲಿ ಈ ಹಿಂದೆಯೂ ಸಹಾ ಸದನದಲ್ಲಿ ಪ್ರತ್ಯೇಕವಾದ ಹಲವಾರು ಬೇಡಿಕೆಗಳು ಮುಂದಾಗಿತ್ತು. ಈ ರಾಜ್ಯ ಸರ್ಕಾರ ಇವತ್ತು ಯಾವ ಆಧಾರದಮೇಲೆ ನಾವು ಹಣವನ್ನು ಕ್ರೋಢಿಕರಿಸಬೇಕು. ಈ ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸಬೇಕು? ಈ ಕಾರ್ಮಿಕರಿಗೆ ಕೊಡಬೇಕಾಗಿರುವ ಸಾಮಾಜಿಕ ಭದ್ರತೆಯ ವಿಚಾರದಲ್ಲಿ ಸಾಕಷ್ಟು ಅಧ್ಯಯನಗಳನ್ನು ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ನಾವು ಮಾಡುವ.....

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೇ, ತಾವು ಸಾಮಾಜಿಕ ನ್ಯಾಯವನ್ನು ಒದಗಿಸುವ ಬಗ್ಗೆ ಪರಿಣಾಮಕಾರಿ ಮಾರ್ಗೋ ಪಾಯವನ್ನು ಸೂಚಿಸಲು ಸಂಸ್ಥೆಯೊಂದು ವರದಿಯನ್ನು ಕೊಟ್ಟಿದೆ. ಅದನ್ನು ಅಭ್ಯಾಸ ಮಾಡುತ್ತಿದ್ದೇವೆಂದು ನೀವು ಹೇಳುತ್ತಿದ್ದೀರಿ. ವರದಿ ಕೊಡುವುದಕ್ಕೆ ಯಾವಾಗ ಅವರನ್ನು ನಾವು ನೇಮಕ ಮಾಡಿದ್ದೆವು? ಯಾವಾಗ ವರದಿ ನಿಮ್ಮ ಕೈಗೆ ಸಿಕ್ಕಿತು? ಯಾವಾಗ ಅದನ್ನು ಕಾರ್ಯರೂಪಕ್ಕೆ ತರುತ್ತೀರಿ? ಆ ದಿನಾಂಕಗಳನ್ನು ಹೇಳಬಹುದೇ? ಯಾವಾಗ ಅವರು ವರದಿಯನ್ನು ಕೊಟ್ಟರು? ಏನು ಪರಿಶೀಲನೆಯನ್ನು ಮಾಡುತ್ತೀರಿ? ಯಾವಾಗ ವಾಪಸ್ ತರುತ್ತೀರಿ ಆ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೋಸ್ಕರ?

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೇ, ಹಿಂದಿನ ಅವಧಿಯಲ್ಲಿ ಒಂದು ಅಸಂಘಟಿತ ಕಾರ್ಮಿಕರ ಮಸೂದೆಯನ್ನು ತರುವ ಉದ್ದೇಶವಿದ್ದು ಅದನ್ನು ರೂಪಿಸಿ ಮೇಲ್ಮನೆಯಲ್ಲಿ ಆ ಪ್ರಸ್ತಾವನೆಯನ್ನು ಅಂಗೀಕಾರ ಪಡೆಯಲು

ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಇದ್ದಂಥ ನ್ಯೂನತೆಗಳನ್ನು ನೋಡಿ ಅದು ಸೆಲೆಕ್ಟ್ ಕಮಿಟಿ ಮುಂದೆ ಹೋಗಿತ್ತು. ಆದರೆ ಪ್ರಸ್ತುತ ಸಾಲಿನಲ್ಲಿ ಸಮ್ಮಿಶ್ರ ಸರ್ಕಾರ ಬಂದಮೇಲೆ ಎರಡೂ ಪಕ್ಷಗಳು ಇವತ್ತು ಕಾಮನ್ ಮಿನಿಮಮ್ ಪ್ರೋಗ್ರಾಮ್‌ನಲ್ಲೂ ಅಸಂಘಟಿತ ಕಾರ್ಮಿಕರಿಗೆ ಹೆಚ್ಚಿನ ಒಂದು ಒತ್ತನ್ನು ಕೊಟ್ಟಿದ್ದೇವೆ. ಇದನ್ನು ಈ ಸಾಲಿನಲ್ಲೇ ಹೈಟೆಕ್ ಸಂಸ್ಥೆಗೆ (GTZ) ಜರ್ಮನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ನೆರವಿನಿಂದ ಇದನ್ನು ಹತ್ತು ತಿಂಗಳ ಅವಧಿಯೊಳಗಾಗಿ ವರದಿಯನ್ನು ತಯಾರಿಸಿ ಅವರು ನಮಗೆ ಈಗಾಗಲೇ ಅವರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಇಲಾಖೆಯ ಅಭಿಪ್ರಾಯಗಳನ್ನು ಕೇಳಲು ನಾನು ಮೇ ಅಂತ್ಯದಲ್ಲಿ ಬಂದಂಥ ವರದಿ ಈಗಾಗಲೇ ಅವರಿಗೆ ಸ್ಪಷ್ಟವಾಗಿ ನಾನು ಕಾಲಾವಕಾಶವನ್ನು ಕೊಟ್ಟು ಎಲ್ಲಾ ಅವರ ಅಭಿಪ್ರಾಯಗಳ ಜೊತೆಗೆ ಬಂದ ನಂತರ ಈ ಸ್ಟೇಕ್ ಹೋಲ್ಡರ್ಸ್ ಯಾರಿದ್ದಾರೆ. ಅವರ ಸಭೆಯನ್ನು ಕರೆಯುವುದಕ್ಕೆ ನಾನು ಮುಂದಾಗಿದ್ದೇನೆ. ಇದರ ಜೊತೆಗೆ ಇವತ್ತು ಪ್ರತ್ಯೇಕವಾಗಿ ಕಟ್ಟಡ ಕಾರ್ಮಿಕರಾಗಿರಬಹುದು, ಅಥವಾ ದರ್ಜಿಗಳಾಗಿರಬಹುದು, ಅಥವಾ ನಮ್ಮ ಬೇರೆ ಕಾರ್ಮಿಕರು ಇವತ್ತು ಸಂಘಟನೆಯನ್ನು ಮಾಡಿಕೊಂಡಿರುವ ಆಟೋ ಚಾಲಕಾರಾಗಿರಬಹುದು, ಇವರು ನಮ್ಮ ಸರ್ಕಾರದ ಮುಂದೆ ಬಂದಂಥ ಸಂದರ್ಭದಲ್ಲಿ ಅವರಿಗೆ ಬೇರೆ ರೀತಿಯಲ್ಲಿ ಅರೋಗ್ಯದ ದೃಷ್ಟಿಯಿಂದ ಏನಾದರೂ ಒಂದು ಕಾರ್ಯಕ್ರಮವನ್ನು ರೂಪಿಸಬಹುದು ಎಂದು ಈಗಾಗಲೇ ನಾವು ಕೈಗೆತ್ತಿಕೊಂಡಿದ್ದೇವೆ. ಅವರಿಗೆ ಕೊಡಬೇಕಾಗಿರುವ ಎಲ್ಲಾ ರೀತಿಯ ಮಾನ್ಯತೆ ಕೊಡುವ ವಿಚಾರದಲ್ಲಿ ಈ ಅಧ್ಯಯನ ವರದಿಯ ಅಧಾರದಮೇಲೆ ಅವರಿಗೆ ಏನೇನು ಸೌಲಭ್ಯಗಳನ್ನು ಕೊಡಬಹುದು, ಅಥವಾ ಖಾಸಗಿ ವಿಮೆ ಕಂಪನಿಗಳಿಂದ ಅವರಿಗೆ ಏನಾದರೂ ಹೆಚ್ಚಿನ ರೀತಿ ನೆರವಾಗುವಂಥ ಯೋಜನೆಯನ್ನು ರೂಪಿಸಬಹುದೇ ಎನ್ನುವ ವಿಚಾರಕ್ಕೆ ಈಗಾಗಲೇ ನಾವು ಸಾಕಷ್ಟು ಸೌಲಭ್ಯಗಳನ್ನು ಮಾಡಿದ್ದೇವೆ. ಅಥವಾ ಖಾಸಗಿ ವಿಮೆ ಕಂಪನಿಗಳಿಂದ ಅವರಿಗೆ ಏನಾದರೂ ಹೆಚ್ಚಿನ ರೀತಿ ನೆರವಾಗುವಂಥ ಯೋಜನೆಯನ್ನು ರೂಪಿಸಬಹುದೇ ಎನ್ನುವ ವಿಚಾರಕ್ಕೆ ಈಗಾಗಲೇ ನಾವು ಸಾಕಷ್ಟು ಸೌಲಭ್ಯಗಳನ್ನು ಮಾಡಿದ್ದೇವೆ. ಇದನ್ನು ಬಹಿರಂಗಪಡಿಸುವ ಮುನ್ನ ಆ ಸ್ಟೇಕ್ ಹೋಲ್ಡರ್ಸ್ ಸಭೆ ಕರೆಯುವುದಕ್ಕೆ ಈಗಾಗಲೇ ನಾವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಯೋಗೀಶ್ ಭಟ್: ಮಾನ್ಯ ಉಪಾಧ್ಯಕ್ಷರೇ, ವಿಶೇಷವಾಗಿ ಇಎಸ್‌ಐ ಆಸ್ಪತ್ರೆಗಳ ವೈಫಲ್ಯ ಆಗಿರುವ ಹಿನ್ನೆಲೆಯಲ್ಲಿ ಈ ಅಸಂಘಟಿತ ಕಾರ್ಮಿಕರನ್ನೂ ಕೂಡ ಆರೋಗ್ಯವಿಮೆಗೆ ತರುವಂಥ ಕಾರ್ಯಕ್ರಮವನ್ನು ತಾವು ಕೈಗೊಳ್ಳುತ್ತೀರಾ? ಎರಡನೆಯದಾಗಿ ಎಂಸಿಎಫ್ ನಂಥ ಕಾರ್ಮಿಕರು ಅಸಂಘಟಿತ ಕಾರ್ಮಿಕರು ಇವತ್ತು ಹೋರಾಟವನ್ನು ನಡೆಸಿ ಯಾವ ರೀತಿ ಅವರು ಬವಣೆಯನ್ನು ಪಡುತ್ತಿದ್ದಾರೆ ಎನ್ನುವುದು ತಮಗೆ ಗೊತ್ತಿದೆ. ಮನವಿ ಮೇಲೆ ಮನವಿಯನ್ನು ತಮಗೆ ಕೊಡಲಾಗಿದೆ.

ಶ್ರೀ ಯೋಗೀಶ್ ಭಟ್ (ಮುಂದು) : ಇವತ್ತಿಗೂ ತಾವು ನ್ಯಾಯವನ್ನು ಕೊಟ್ಟಿಲ್ಲ. ಟೈಲರ್ಸ್ ಅಸೋಸಿಯೇಷನ್ ಕಡೆಯಿಂದ ಮನವಿ ಕೊಟ್ಟಿದ್ದಾರೆ. ಇವತ್ತಿಗೂ ನ್ಯಾಯ ಕೊಟ್ಟಿಲ್ಲ. ಕನಿಷ್ಠ ಅವರಿಗೆ ನ್ಯಾಯ ಕೊಡುವಂತಹ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಹೇಳಬೇಕು. ಎರಡನೆಯದು ಮಸೂದೆಯನ್ನು ಈ ಅಧಿವೇಶನದಲ್ಲಿಯೇ ಮಂಡಿಸುತ್ತೀರಾ ಎನ್ನುವಂತಹದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ತನ್ವೀರ್ ಸೇಠ್: ಮಂಗಳೂರಿನಲ್ಲಿರುವಂತಹ ಎಂಸಿಎಫ್ ಕಾರ್ಖಾನೆಯ ವಿಚಾರದಲ್ಲಿ ಗುತ್ತಿಗೆ ಕಾರ್ಮಿಕರ ಸಮಸ್ಯೆ 154 ಜನರ ಸಮಸ್ಯೆ ವಿಚಾರವಾಗಿ ಬಹುತೇಕ ಹಿಂದಿನ ಅಧಿವೇಶನದಲ್ಲಿ ಬಂದಿತ್ತು. ಪತ್ರಿಕೆಗಳಲ್ಲಿ ದಿನನಿತ್ಯ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಗುತ್ತಿಗೆ ಕಾರ್ಮಿಕರಿಗೆ ರಕ್ಷಣೆ ಕೊಡುವಂತಹ ಅಂಶ ಕಾನೂನಿನಲ್ಲಿಯೂ ಅದು ಹೆಚ್ಚಾಗಿ ಇಲ್ಲದೇ ಇರುವುದರಿಂದ ಹಾಗೂ ಆ ಕಾರ್ಮಿಕರಿಗೆ ನಾವು ನಿಗದಿ ಮಾಡಿರುವಂತಹ ಕನಿಷ್ಠ ವೇತನಕ್ಕಿಂತ ಹತ್ತು ಪಟ್ಟು ಜಾಸ್ತಿ ಅವರಿಗೆ ವೇತನ ದೊರೆಯುತ್ತಿದ್ದರೂ ಸಹ ಇದ್ದಂತಹ ಸಣ್ಣ ಭಿನ್ನಾಭಿಪ್ರಾಯಕ್ಕೆ ಇವತ್ತು ಕಾರ್ಮಿಕರು ಹೊರಕ್ಕೆ ಬಂದು, ಅವರ ಹೋರಾಟ ಏನು ಇದೆ? ಆ ಬಗ್ಗೆ ನನ್ನ ಇಲಾಖೆ ಅಧಿಕಾರಿಗಳು ಸಂಧಾನ ಮಾಡಿ ಮತ್ತೆ ಕಾರ್ಮಿಕರನ್ನು ಮಾಲೀಕರ ಜೊತೆಗೆ ಈಗಾಗಲೇ ಕಳಿಸಿಕೊಟ್ಟಿದ್ದೇವೆ. ಬಹುಶಃ ಯಾವ ಹಂತದಲ್ಲಿ ಅದು ಇದೆ ಎಂದು ನಾನು ವಿಚಾರಿಸಿ ಹೇಳುತ್ತೇನೆ. ದರ್ಜಿಗಳ ವಿಚಾರವಾಗಿ ನಾನು ಇದೇ ಸದನದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಅವರಿಗೆ ನಾವು ಪ್ರತ್ಯೇಕ ಕಾರ್ಯಕ್ರಮ ರೂಪಿಸುತ್ತೇವೆ? ನಾವು ಅವರಿಗೆ ಪ್ರತ್ಯೇಕವಾಗಿ ಕರೆದು ಮಾತನಾಡಿ, ಅವರಿಗೆ ಕೊಡಬೇಕಾಗಿರುವಂತಹ ಸೌಲಭ್ಯಗಳನ್ನು ಯಾವ ರೀತಿ ಕೊಡಬಹುದು ಎಂಬ

ಬಗ್ಗೆ ಈಗಾಗಲೇ ಅಧ್ಯಯನ ವರದಿ ಸಹ ಬಂದಿರುವುದರಿಂದ ನಾವು ಮಾಡುವುದಕ್ಕೆ ಮುಂದಾಗುತ್ತೇವೆ. ಈ ಎಲ್ಲಾ ವರ್ಗದ ಕಾರ್ಮಿಕರಿಗೆ ನಾವು ಇವತ್ತು ಸಹಕಾರಿ ಕ್ಷೇತ್ರದಲ್ಲಿ ನಾವೇನು ಯಶಸ್ವಿನಿ ಕಾರ್ಯಕ್ರಮ ರೂಪಿಸಿದ್ದೇವೆ, ಅದೇ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ರೂಪಿಸುವ ವಿಚಾರದಲ್ಲಿ ಅದರ ಸಾಧಕ–ಬಾಧಕಗಳನ್ನು ಈಗಾಗಲೇ ನಾವು ಕೈಗೆತ್ತಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಅದಕ್ಕೆ ಸ್ಪಷ್ಟವಾಗಿ ಎಲ್ಲಾ ಕಾರ್ಮಿಕರಿಗೂ ಒಂದು ಸಾಮಾಜಿಕ ಭದ್ರತೆ ಕೊಡುವ ವಿಚಾರದಲ್ಲಿ ಸರ್ಕಾರ ಬದ್ಧ ಎಂದು ಹೇಳುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.